**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್. ಸಿ., ಪಾವಗಡ ನ್ಯಾಯಾಲಯ**

**ಓ.ಎಸ್. ಸಂಖ್ಯೆ 292 /2024**

**ದಿನಾಂಕ 24.09.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಿ.ಡಬ್ಲೂ 1**

| | | |
|---|---|---|
| ಸಾಕ್ಷಿದಾರರ ಹೆಸರು | - | ಕೆ.ಟಿ.ರಾಜಗೋಪಾಲ |
| ತಂದೆಯ ಹೆಸರು | - | ಲೇ.ತಿಮ್ಮರಾಯಪ್ಪ |
| ವಯಸ್ಸು | - | 51 ವರ್ಷ |
| ವೃತ್ತಿ | - | ವ್ಯವಸಾಯ ಮತ್ತು ಖಾಸಗಿ ಕೆಲಸ |
| ವಾಸ ಸ್ಥಳ | - | ಕನ್ನಮೇಡಿ ಗ್ರಾಮ |

**ಮುಖ್ಯ ವಿಚಾರಣೆಃ ವಾದಿಗಳ ಪರ ಶ್ರೀ. ಆರ್.ವಿ ವಕೀಲರಿಂದಃ**

ನಾನು ಈ ದಾವಾದಲ್ಲಿ ವಾದಿಯಾಗಿದ್ದೇನೆ. ನಾನು ನನ್ನ ಮುಖ್ಯ ವಿಚಾರಣೆಯನ್ನು ಸಾಕ್ಷ್ಯ ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ ಸದರಿ ಪ್ರಮಾಣ ಪತ್ರದಲ್ಲಿರುವ ಅಂಶಗಳನ್ನು ನಾನೇ ಖುದ್ದಾಗಿ ಬರೆಯಿಸಿರುತ್ತೇನೆ ಹಾಗೂ ಅದರಲ್ಲಿರುವ ಅಂಶಗಳು ಸತ್ಯವೆಂದು ಪ್ರಮಾಣೀಕರಿಸಿ ಸಹಿ ಮಾಡಿರುತ್ತೇನೆ.

ನಾನು ಮುಂದಿನ ದಾಖಲೆಗಳನ್ನು ಹಾಜರುಪಡಿಸಿದ್ದೇನೆ ಅವುಗಳನ್ನು ನಿಶಾನೆಗಳನ್ನಾಗಿ ಗುರುತಿಸಬೇಕಾಗಿ ಕೋರಿಕೊಳ್ಳುತ್ತೇನೆ.

ಕನ್ನಮೇಡಿ ಗ್ರಾಮದ ಸ.ನಂ. 7/4 ರ ಹತ್ತು ಪಹಣಿ ಪತ್ರಿಕೆಗಳನ್ನು ಹಾಜರು ಮಾಡಿದ್ದೇನೆ. ಅವುಗಳನ್ನು ನಿಪಿ-1 ರಿಂದ 10 ಎಂದು ಗುರುತಿಸಲಾಯಿತು. ದಿ.10.07.1981 ರ ಕ್ರಯ ಪತ್ರದ ದೃಢೀಕೃತ ದಾಖಲೆಯನ್ನು ಹಾಜರು ಮಾಡಿದ್ದೇನೆ ಅದನ್ನು ನಿಪಿ-11 ಎಂದು ಗುರುತಿಸಲಾಯಿತು. ಎಂ.ಆರ್.ನಂ.22/1981-82 ನ್ನು

ಹಾಜರು ಮಾಡಿದ್ದೇನೆ. ಅದನ್ನು ನಿಪಿ-12 ಎಂದು ಗುರುತಿಸಲಾಯಿತು. ದಿ.04.09.2019 ರ ದೃಢೀಕೃತ ಕ್ರಯ ಪತ್ರವನ್ನು ಹಾಜರು ಮಾಡಿದ್ದೇನೆ. ಅದನ್ನು ನಿಪಿ-13 ಎಂದು ಗುರುತಿಸಲಾಯಿತು. ದಿ.13.06.2024 ರ ನೋಟಿಸ್ ನ ಕಛೇರಿ ಪ್ರತಿಯನ್ನು ಹಾಜರು ಮಾಡಿದ್ದೇನೆ. ಅದನ್ನು ನಿಪಿ-14 ಎಂದು ಗುರುತಿಸಲಾಯಿತು. ಎರಡು ಅಂಚೆ ರಶೀದಿಗಳನ್ನು ಹಾಜರು ಮಾಡಿದ್ದೇನೆ. ಅವುಗಳನ್ನು ನಿಪಿ-15 ಮತ್ತು 16 ಎಂದು ಗುರುತಿಸಲಾಯಿತು. ಜಾರಿಯಾಗದೆ ವಾಪಸ್ಸಾದ ಎರಡು ಅಂಚೆ ಲಕೋಟೆಗಳನ್ನು ಹಾಜರು ಮಾಡಿದ್ದೇನೆ. ಅವುಗಳನ್ನು ನಿಪಿ-17, 18 ಮತ್ತು ಸದರಿ ಅಂಚೆ ಲಕೋಟೆಯಲ್ಲಿವ ನೋಟಿಸ್ ಪ್ರತಿವಯನ್ನು ನಿಪಿ-17(ಎ) ಮತ್ತು 18(ಎ) ಎಂದು ಗುರುತಿಸಲಾಯಿತು. ಪಕ್ಕಾ ಪುಸ್ತಕವನ್ನು ಹಾಜರು ಮಾಡಿದ್ದೇನೆ. ಅದನ್ನು ನಿಪಿ-19 ಎಂದು ಗುರುತಿಸಲಾಯಿತು.

ಎರಡು ಬಾವಚಿತ್ರಗಳನ್ನು ಹಾಜರು ಮಾಡಿದ್ದೇನೆ ಅವುಗಳನ್ನು ನಿಪಿ3 ಮತ್ತು ನಿಪಿ4 ಎಂದು ಗುರುತಿಸಲಾಯಿತು. ದಿನಾಂಕಃ 19.04.2023 ರ ಅರ್ಜಿಯ ಕಚೇರಿ ಪ್ರತಿಯನ್ನು ಹಾಜರು ಮಾಡಿದ್ದೇನೆ. ಅದನ್ನು ನಿಪಿ5 ಎಂದು ಗುರುತಿಸಲಾಯಿತು. ನನ್ನ ತಂದೆಯ ಮರಣ ಪ್ರಮಾಣಪತ್ರವನ್ನು ಹಾಜರು ಮಾಡಿದ್ದೇನೆ  ಅದನ್ನು ನಿಪಿ6 ಎಂದು ಗುರುತಿಸಲಾಯಿತು. ದಿನಾಂಕಃ 06.12.2022 ರ ಮಾಹಿತಿ ಹಕ್ಕು ಅರ್ಜಿಯನ್ನು ಹಾಜರು ಮಾಡಿದ್ದೇನೆ.  ಅದನ್ನು ನಿಪಿ7 ಎಂದು ಗುರುತಿಸಲಾಯಿತು. ವಾಸಸ್ಥಳ ದೃಡೀಕರಣಪತ್ರವನ್ನು ಹಾಜರು ಮಾಡಿದ್ದೇನೆ ಅದನ್ನು ನಿಪಿ8 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಮುಂದುವರೆದ ಮುಖ್ಯವಿಚಾರಣೆಗೆ ಕಾಲಾವಕಾಶ ಕೋರಿದ್ದು, ಆಲಿಸಿ, ಮುಂದೂಡಲಾಯಿತು.)**

(ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ . ಹೇ. ಕೇ.  ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್. ಸಿ.,
ಪಾವಗಡ